**ಸಾಕ್ಷಿಯನ್ನು ದಿಃ 06.11.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ. ಕೆ ಎಂ ., ವಕೀಲರಿಂದಃ**

ನಾನು ಪ್ರತಿವಾದಿಗಳ ಸಂಬಂಧದ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ನೀಡಿದ್ದೇನೆ ಮತ್ತು ನನ್ನ ವಾದ ಪತ್ರದಲ್ಲಿ ಹೇಳಿದ್ದೇನೆ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ದಿಃ05.07.1985 ರಲ್ಲಿ ನಾನು ಮತ್ತು ನನ್ನ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿದ್ದೆವು ಎಂದರೆ ಸಾಕ್ಷಿಯು ಸುಮಾರು 40 ವರ್ಷಗಳ ಹಿಂದೆ ಮಾಡಿಕೊಂಡಿದ್ದೆವು ಎಂದು ನುಡಿಯುತ್ತಾರೆ. ಸದರಿ ವಿಭಾಗವೂ ಲಿಖಿತ ರೂಪದಲ್ಲಿ ಮಾಡಿಕೊಂಡಿಲ್ಲ. 40 ವರ್ಷಗಳ ಹಿಂದೆ ವಿಭಾಗದಲ್ಲಿ ನಾಗನಹಳ್ಳಿಯಲ್ಲಿ ಸ.ನಂ.34 ರಲ್ಲಿ ಅರ್ಧ ಎಕರೆ , ಸ.ನಂ.150 ರಲ್ಲಿ ಮುಕ್ಕಾಲು ಎಕರೆ ನನ್ನ ಭಾಗಕ್ಕೆ ಬಂದಿರುತ್ತದೆ. 1 ನೇ ಪ್ರತಿವಾದಿ ಅಂದರೆ ನನ್ನ ಅಣ್ಣನಿಗೆ ವಿಭಾಗದಲ್ಲಿ ಎಷ್ಟು ಆಸ್ತಿಗಳು ಬಂತು ಎಂದು ನನಗೆ ಗೊತ್ತಿಲ್ಲ. ಆಗ 1 ನೆೀ ಪ್ರತಿವಾದಿಗೆ ಸ.ನಂ.34 ರಲ್ಲಿ 1 ಎಕರೆ ಪೈಕಿ 20 ಗುಂಟೆ ಮತ್ತು 12 ಕಾಲು ಗುಂಟೆ ಹೋಗಿರುತ್ತದೆ ಎಂದರೆ ಸರಿ. ಸದರಿ 12 ಕಾಲು ಗುಂಟೆ ಜಮೀನಿನಲ್ಲಿ 1 ನೇ ಪ್ರತಿವಾದಿ ಕೊಳವೆ ಬಾವಿ ಹಾಕಿದ್ದಾನೆ ಎಂದರೆ ಸರಿಯಲ್ಲ. 20 ಗುಂಟೆ ಜಮೀನಿನಲ್ಲಿ ಕೊಳವೆ ಬಾವಿ ಹಾಕಿದ್ದಾನೆ ಎಂದರೆ ಸರಿ. 12 ಮತ್ತು 20 ಗುಂಟೆ ಜಮೀನಿನಲ್ಲಿ ರೇಷ್ಮೆ ಬೆಳೆಯುತ್ತಿಲ್ಲ ಬದಲಾಗಿ ಸೀಮೆ ಹುಲ್ಲು ಮತ್ತು ರಾಗಿ ಬೆಳೆ ಬೆಳೆಯುತ್ತಿದ್ದಾರೆ. ಸದರಿ ವಿಷಯವನ್ನು ನನ್ನ ವಕೀಲರಿಗೆ ಹೇಳಿದ್ದೇನೆ. 40 ವರ್ಷಗಳ ಹಿಂದೆ ಆದ ವಿಭಾಗದಲ್ಲಿ ಅವರವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ವಿಭಾಗದ ಕಾಲದಲ್ಲಿ ಒಂದು ಆನೊಂದಾಯಿತ ಪಾಲುಪಟ್ಟಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ವಿಭಾಗವಾಗುವ ಕಾಲಕ್ಕೆ ನನ್ನ ತಂದೆ ಬದುಕಿದ್ದರು. ನನ್ನ ತಂದೆ ಸ್ವಾಧೀನದಲ್ಲಿದ್ದ ಆಸ್ತಿಗಳನ್ನು ವಿಭಾಗಕ್ಕೆ ಕೊಟ್ಟರು ಎಂದರೆ ಸರಿ. ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವಾಧೀನದಲ್ಲಿತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ತಂದೆಯ ಸ್ವಾಧೀನದಲ್ಲಿ ಇತ್ತು ಎಂದರೆ ಸರಿಯಲ್ಲ ಮತ್ತು ದಾಖಲೆಗಳು ನನ್ನ ತಂದೆಯ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ತಂದೆ ವಿಭಾಗದಲ್ಲಿ ಹಂಚಿದರು ಎಂದರೆ ಸರಿಯಲ್ಲ. ಸ.ನಂ.34 ರಲ್ಲಿ 10 ಗುಂಟೆ ಮತ್ತು 12 ಕಾಲು ಗುಂಟೆ ನನ್ನ ಅಣ್ಣನ ಭಾಗಕ್ಕೆ ಬಂತು ಎಂದರೆ ಸಾಕ್ಷಿ ಹಗ್ಗಗಳಲ್ಲಿ ಅಳೆದ ಕಾರಣ ಅಳತೆ ನನಗೆ ಗೊತ್ತಿಲ್ಲ. ಸದರಿ ಸ.ನಂ.34 ರಲ್ಲಿ

10 ಗುಂಟೆ ಮತ್ತು 12 ಕಾಲು ಗುಂಟೆ ನನ್ನ ಅಣ್ಣನಿಗೆ ಹೋಯಿತು ಎಂದು ನನ್ನ ವಕೀಲರಿಗೆ ತಿಳಿಸಿಲ್ಲ ಮತ್ತು ಸದರಿ ವಿಷಯವನ್ನು ನನ್ನ ವಾದ ಪತ್ರದಲ್ಲಿ ಹೇಳಿಲ್ಲ. ನಾನು ದಾವೆ ಹೂಡಿರುವ ಸ.ನಂ.34 ಎಂದರೆ ಸರಿ. ಪ್ರತಿವಾದಿ ರೇಷ್ಮೆ ಬೆಳೆ ಹಾಕಿಕೊಂಡು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆತನ ಸ್ವತ್ತಿನಲ್ಲಿ ಆತನು ಸ್ವಾಧೀನದಲ್ಲಿ ಇದ್ದಾನೆಂದು ನುಡಿಯುತ್ತಾರೆ. ನನ್ನ ತಂದೆ ಸ್ವಾಧೀನದಲ್ಲಿದ್ದರೂ ಕೂಡ ದಾವಾ ಸ್ವತ್ತುನ್ನು ನನ್ನ ಹೆಸರಿಗೆ ಮಂಜೂರು ಮಾಡಿಕೊಂಡು ಇದ್ದೇನೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಸೃಷ್ಟಿಮಾಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

**ಓ ಹೇ ಕೇ ಸರಿ ಇದೆ.**

**(ಚಂದ್ರಶೇಖರ್ ಅಲಬೂರು)**
**ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ.**